<u>ದಿನಾಂಕ 04.12.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ- ಶ್ರೀ ಎಂ ಎಸ್ ಕೆ ಪ್ರತಿವಾದಿಗಳ ಪರ ವಕೀಲರಿಂದಃ</u>

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆಯಾದ ರಂಗಪ್ಪರವರಿಗೆ 1 ನೇ ಪ್ರತಿವಾದಿ ಹಾಗೂ ವಾದಿ ಇಬ್ಬರೂ ಮಕ್ಕಳು. ವಾದಿ ಈಗ ಬದುಕಿರುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ವಾದಿಗೆ ಭಾಧ್ಯ ಪಟ್ಟ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ವಾದಿಯು ನನ್ನ ಚಿಕ್ಕಪ್ಪನಾದ ಎಲ್ಲಪ್ಪನವರಿಗೆ ಮಾರಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯೆಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿ ಹಾಗೂ 1 ನೇ ಪ್ರತಿವಾದಿಯಾದ ತಂದೆಯವರಾದ ರಂಗಪ್ಪನವರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಯು ರಂಗಪ್ಪನವರ ಹೆಸರಿನಲ್ಲಿ ಇರದೆ ನಂಜಪ್ಪಶೆಟ್ಟಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ವಾದಿಯು ಊರಿನ ಪಂಚಾಯಿತಿದಾರರ ಮುಂದೆ ನನಗೆ ದಾವಾ ಆಸ್ತಿಯಲ್ಲಿ ಭಾಗ ಬೇಕೆಂದು ಕೇಳಿದ್ದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು ಆ ರೀತಿ ವಾದಿಯು ಸುಮಾರು 5 ವರ್ಷರ್ಗಳ ಹಿಂದೆ ಆ ರೀತಿ ಹೇಳಿರುತ್ತಾರೆ. ವಾದಿ ಹಾಗೂ ಆತನ ಮಗ ಪಳನಿಯಪ್ಪ ಹಿಂದಿನಿಂದಲೂ ಸತ್ತೇಗಾಲದ ಜಾಗೇರಿಯಲ್ಲಿ ವಾಸಿಸುತ್ತ ಬಂದಿರುತ್ತಾರೆ ಎಂದರೆ ಸರಿ. ಸದರಿ ಸತ್ತೇಗಾಲದ ಜಾಗೇರಿಯಲ್ಲಿ ವಾದಿಯು ಜಮೀನನ್ನು ಹೊಂದಿದ್ದು ಅಲ್ಲಿ ಅವರು ಮನೆಯನ್ನು ಕಟ್ಟಿಕೊಂಡು ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ವಾದಿ ಹಾಗೂ 1 ನೇ ಪ್ರತಿವಾದಿಯ ತಂದೆಯಾದ ರಂಗಪ್ಪನವರಿಗೆ ಎಲ್ಲೆಲ್ಲಿ ಎಷ್ಟು ಆಸ್ತಿಗಳಿವೆ ಎಂದು ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ.

ವಾದಿಯ ಮಗನಾದ ಪಳನಿಯಪ್ಪನವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುಬೇಕೆಂದು ಕೇಳಿಕೊಂಡ ಮೇರೆಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದ್ದು ಆತ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾನೆ ಎಂದರೆ ಸರಿ . ಈ ದಾವೆಯ ಯಾವ ಸಂಗತಿಗಳು

ನನಗೆ ತಿಳಿಯದಿದ್ದರೂ ಸಹ ವಾದಿ ಹಾಗೂ ಅವರ ಮಗನ ಕೋರಿಕೆಯ ಮೇರೆಗೆ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ

ಸಿ.ಸಿ . ನಂ.                                                                                    ಪಿಡಬ್ಲ್ಯೂಃ 1

ದಿನಾಂಕ 04.12.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ – ಶ್ರೀ ಎನ್ ಆರ್ ಕೆ ವಕೀಲರಿಂದಃ

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ